ದಲ್ಲಾಳಿಗಳು, ಹಸು ಮಾರುವವರು ಬ್ಯಾಂಕ್ ಅಧಿಕಾರಿಗಳ, ದನದ ಡಾಕ್ಟರ್‌ಗಳ ಮರ್ಜಿ ಹಿಡಿಯುತ್ತಿದ್ದರು. ಇಬ್ಬರಿಗೂ ಕಮಿಷನ್ ಸಿಗುತ್ತಿತ್ತು. ಜೊತೆಗೆ ಬ್ಯಾಂಕ್ ಅಧಿಕಾರಿಗಳು ಸಾಲಗಾರರಿಂದಲೂ ವಸೂಲು ಮಾಡುವುದಿತ್ತು.

ನಗರದಲ್ಲಿ ಕೆಲಸ ಮಾಡಿದ್ದ ಕೃಷ್ಣಪ್ಪಗೆ ಈ ವ್ಯವಹಾರಗಳು ಹೊಸದು. ಇವೆಲ್ಲ ತಿಳಿದು ಬೇಸರವಾಗಿ ರೈತರಿಗೆ ಅನ್ಯಾಯ ಮಾಡಕೂಡದೆಂದು ಗ್ರಾಮೀಣ ಅಭಿವೃದ್ಧಿ ಅಧಿಕಾರಿಗೆ ಬುದ್ಧಿವಾದ ಹೇಳಿದ್ದರು. ಕೃಷ್ಣಪ್ಪರಿಗಿಂತ ಮೊದಲೇ ಬಂದಿದ್ದ ಅಧಿಕಾರಿ ಇಂತದ್ದರಲ್ಲಿ ಪಳಗಿದ್ದ. ಕೃಷ್ಣಪ್ಪರನ್ನು ಹೇಗೆ ಏಮಾರಿಸಬೇಕೆಂದು ಅರಿತಿದ್ದ ಆತ ಅವರು ರಜೆಯಲ್ಲಿದ್ದಾಗ ತನ್ನ ಅಧಿಕಾರ ಬಳಸಿ ಸಾಲಗಳನ್ನು ಮಂಜೂರು ಮಾಡಿ ಸಾಕಷ್ಟು ಗಿಂಜಿಕೊಂಡಿದ್ದ. ಕೃಷ್ಣಪ್ಪ ರೋಸಿ ಹೋಗಿದ್ದರು. ದಾಖಲೆಗಳನ್ನು ಸಿದ್ಧಪಡಿಸಿ ಪ್ರಧಾನ ಕಚೇರಿಗೆ ತಿಳಿಸುತ್ತೇನೆಂದು ಬೆದರಿಸಿದರು. ಆತ ಭಯ ಪಟ್ಟ. ಇನ್ನೆಂದೂ ಇಂತದ್ದು ಮಾಡುವುದಿಲ್ಲವೆಂದು ಮಾತು ಕೊಟ್ಟ. ಇಲ್ಲಿದ್ದರೆ ಕಷ್ಟವೆಂದು, ತಿಂಗಳಲ್ಲೆ ಟ್ರಾನ್ಸ್‌ಫರ್ ಮಾಡಿಕೊಂಡು ಹೋದ. ಕೃಷ್ಣಪ್ಪಗೆ ಎಚ್‌ಎಫ್, ಜರ್ಸಿ ಮಿಶ್ರ ತಳಿ ಹಸುಗಳ ಬಗ್ಗೆ ಹೆಚ್ಚೇನೂ ತಿಳಿವಳಿಕೆ ಇರಲಿಲ್ಲ. ದಲ್ಲಾಳಿಗಳನ್ನು ಜಾನುವಾರು ಮಾರುವವರನ್ನು ನಂಬುವಂತಿರಲಿಲ್ಲ. ಅವರಿವರ ಹತ್ತಿರ ವಿಚಾರಿಸಿ, ಇದ್ದವರಲ್ಲಿ ನ್ಯಾಯವಂತನೆಂದು ಹೇಳಲ್ಪಟ್ಟ ದಲ್ಲಾಳಿಯನ್ನು ಪರಿಚಯಿಸಿಕೊಂಡಿದ್ದರು. ಆತ ತೀರಾ ಸುಳ್ಳು ಹೇಳಿ ವ್ಯಾಪಾರ ಮಾಡುತ್ತಿರಲಿಲ್ಲ. ಮ್ಯಾನೇಜರ್ ಕಮಿಷನ್ನಿಗೆ ಆಸೆ ಪಡುವವರಲ್ಲ ಎಂದು ಗೊತ್ತಾದ ಮೇಲೆ ಒಳ್ಳೆಯ ಹಸು ತೋರಿಸಿ ನ್ಯಾಯವಾದ ದರ ನಿಗದಿ ಮಾಡುತ್ತಿದ್ದ.

ಆತ ತೋರಿಸಿದ ಎಚ್‌ಎಫ್ ಹಸು ಸಾವಿತ್ರಿಗೆ ಇಷ್ಟವಾಯಿತು. ಇತ್ತೀಚೆಗಷ್ಟೇ ಕರು ಹಾಕಿದೆ. ಆದರೆ ಕರು ಸತ್ತು ಹೋಗಿದೆ ಎಂದ ಮಾರಾಟಗಾರ. ಗಂಡು ಕರುವನ್ನು ಕೊಳ್ಳುವವರಿಲ್ಲ. ಆದ್ದರಿಂದ ಕರು ಇಲ್ಲ ಎನ್ನುತ್ತಾರೆ. ಆತ ಇಪ್ಪತ್ತು ಲೀಟರ್ ಹಾಲು ಕೊಡುತ್ತದೆಂದು ಹೇಳಿದ್ದು ನಿಜ ಇರಬಹುದೆಂದು ತೋರಿತು. ಕೆಚ್ಚಲು ತುಂಬಿದ್ದು, ಮೊಲೆ ತೊಟ್ಟುಗಳು ನೇರವಾಗಿ ನೆಲ ನೋಡುತ್ತಿತ್ತು. ಅನುಮಾನವಿದ್ದರೆ ಹಾಲು ಕರೆದು ಪರೀಕ್ಷಿಸಲು ಅವಕಾಶವಿತ್ತು. ಸಾವಿತ್ರಿ, 'ಬೇಡ' ಎಂದಳು.

ದಲ್ಲಾಳಿ ಮಾರಾಟಗಾರರ ಹತ್ತಿರ ವ್ಯವಹಾರ ಕುದುರಿಸಿದ. ಅವನಿಗೆ ಕೊಡಬೇಕಾದ ಕಮಿಷನ್ ಕೊಡಿಸಿದ ಕೃಷ್ಣಪ್ಪ ಪಶುವೈದ್ಯರಿಂದ ಪರೀಕ್ಷೆ ಮಾಡಿಸಿ, ಗುರುತುಗಳನ್ನು ಬರೆಸಿ ದೃಢೀಕರಣ ಪತ್ರ ಪಡೆದು, ಕಿವಿಗೆ ಓಲೆ ಹಾಕಿಸಿದರು. ಮಾರಾಟಗಾರ ಬ್ಯಾಂಕಿಗೆ ಬಂದು ಡಿಮ್ಯಾಂಡ್ ಡ್ರಾಫ್ಟ್ ಪಡೆದುಕೊಂಡ. ಜಾನುವಾರುಗಳಿಗೆ ಇನ್ಶುರೆನ್ಸ್ ಮಾಡುವುದು ಕಡ್ಡಾಯ. ಅದನ್ನು ತಡ ಮಾಡುವಂತಿಲ್ಲ. ಇನ್ಶುರೆನ್ಸ್ ಮೊತ್ತವನ್ನು ಸಾಲಗಾರರು ತುಂಬಬೇಕು. ಕೃಷ್ಣಪ್ಪ ಸಾಲದ ಖಾತೆಗೆ ಇನ್ಶುರೆನ್ಸ್ ಪ್ರೀಮಿಯಮನ್ನು ಖರ್ಚು ಹಾಕಿ, ಅದನ್ನು ಕಟ್ಟುವಂತೆ ಸಾವಿತ್ರಿಗೆ ತಿಳಿಸಿದರು.

ಹಸು ಕಟ್ಟಿದ ವಾರಕ್ಕೆ ಸಾವಿತ್ರಿ ಬ್ಯಾಂಕಿಗೆ ಬಂದಳು. ಮುಖದಲ್ಲಿ ಎಂದಿಲ್ಲದ ಸಂತಸವಿತ್ತು. ಇಪ್ಪತ್ತು ಲೀಟರ್ ಹಾಲು ಕೊಡುತ್ತದೆ ಎಂದಳು. ಹದಿನೈದು ಲೀಟರ್ ಸೊಸೈಟಿಗೆ ಹಾಕಿ ಐದು ಲೀಟರ್ ಖಾನಾವಳಿಗೆ ಹಾಕುತ್ತೇನೆ ಅಂದಳು. ಸಾವಿತ್ರಿ ಖಾನಾವಳಿಯಲ್ಲಿ ಪಾತ್ರೆ ತೊಳೆಯಲು ಹೋಗುತ್ತಿದ್ದಳು. ಅವರೇ ಶೆಡ್‌ಗೆ ಹಣ ಕೊಟ್ಟಿದ್ದರಂತೆ. 'ಹಾಲಿನ ದುಡ್ಡಲ್ಲಿ ಹಿಡಿದುಕೊಳ್ಳಿ' ಎಂದು ಹೇಳಿದ್ದೇನೆ ಎಂದಳು. ಕೃಷ್ಣಪ್ಪ ಪ್ರತಿ ತಿಂಗಳು ಸಾಲದ ಕಂತುಗಳು ಬಂದಿವೆಯೋ ನೋಡುತ್ತಿದ್ದರು. ಮೂರು ತಿಂಗಳು ಕಟ್ಟಿದ್ದಳು. ಇನ್ಶುರೆನ್ಸ್‌ನ ಹಣ ತುಂಬಿರಲಿಲ್ಲ. ಅವಳಿಗದನ್ನು ತಿಳಿಸಬೇಕು ಎಂದು ಯೋಚಿಸುತ್ತಿರುವಾಗ ಅವಳೇ ಬಂದಳು. ಏದುಸಿರು ಬಿಡುತ್ತಾ ಹಸುವಿಗೆ ಹುಷಾರಿಲ್ಲ, ಮೇವು ತಿನ್ನುವುದಿಲ್ಲ, ನೀರು ಕುಡಿಯುವುದಿಲ್ಲ ಎಂದಳು.

ಹಸು ಮೇವು ತಿನ್ನುವುದು ಕಡಿಮೆ ಮಾಡಿದ ನಂತರ ಹಾಲು ಕರೆಯುವುದೂ ಕಮ್ಮಿಯಾಗಿತ್ತು. ಸಾವಿತ್ರಿ ಖಾನಾವಳಿಗೆ ಹೋಗುವಾಗ ಪಕ್ಕದ ಖಾಲಿ ಜಾಗದಲ್ಲಿ ಮೇಯಲು ಬಿಡುತ್ತಿದ್ದಳು. ಸಾಕಷ್ಟು ದೊಡ್ಡದಾಗಿದ್ದ ಆ ಜಾಗದಲ್ಲಿ ಹಸು ಮೇದುಕೊಂಡಿರುತ್ತಿತ್ತು. ಹಿಂಡಿ, ಬೂಸಾ ತಿನ್ನುವುದನ್ನು ಕಡಿಮೆ ಮಾಡಿದಾಗ ಹುಲ್ಲು ತಿಂದು ಹೊಟ್ಟೆ ತುಂಬಿರುತ್ತದೆ ಎಂದುಕೊಂಡಿದ್ದಳು. ಹೊಟ್ಟೆ ಬಿಗಿದಂತಾಗಿ, ನೀರೂ ಕುಡಿಯದಿದ್ದಾಗ ಗಾಬರಿಯಾಗಿತ್ತು.

'ಆಸ್ಪತ್ರೆಗೆ ಹೋಗಲಿಲ್ಲವೇ?' ಕೃಷ್ಣಪ್ಪ ಕೇಳಿದರು.